ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯಆಯುಕ್ತರಕಛೇರಿ, ನೃಪತುಂಗರಸ್ತೆ, ಬೆಂಗಳೂರು

ಸಂಖ್ಯೆ: ಸಿ3(7) ಮ.ದಾ ಸ್ಯಾಟ್ಸ್ ಅಂಕಿ-ಅಂಶ/01/2021-22 ದಿನಾಂಕ: 28/12/2021.

ಜ್ಞಾಪನ.

ವಿಷಯ: ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳ ದಾಖಲಾತಿ ಅಂಕಿ-ಅಂಶಗಳನ್ನು ದಿನಾಂಕ: 31/12/2021ರಲ್ಲಿ ಇದ್ದಂತೆ ಸ್ಯಾಟ್ಸ್ ತಂತ್ರಾಂಶದಲ್ಲಿ ದೃಢೀಕರಿಸುವ ಬಗ್ಗೆ:

ಉಲ್ಲೇಖ:1. ಈ ಕಛೇರಿ ಸುತ್ತೋಲೆ ಸಂಖ್ಯೆ: ಸಿ7(3) ಪ್ರಾಶಿಅ/ಖಾ.ಶಾಲಾ.ಮ.ದಾ & ಶುಲ್ಕ 03/2021-22 ದಿನಾಂಕ: 29/11/2021.

2. ಮಾನ್ಯ ಆಯುಕ್ತರವರೊಂದಿಗೆ ದಿನಾಂಕ: 28/12/2021 ರಂದು ನಡೆದ ಸಭಾ ಸೂಚನೆಯಂತೆ.

-----*****----

ವಿಷಯದನ್ವಯ, ಪ್ರಸ್ತುತ 2021-22ನೇ ಶೈಕ್ಷಣಿಕ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಸರ್ಕಾರಿ ಪ್ರೌಢಶಾಲೆಗಳಲ್ಲಿ ಮಕ್ಕಳ ದಾಖಲಾತಿಗೆ ಅನುಗುಣವಾಗಿ 2022-23ನೇ ಸಾಲಿಗೆ ಇಲಾಖಾ ಪ್ರೋತ್ಸಾಹದಾಯಕ ಯೋಜನೆಗಳು ಮತ್ತು ಇತರೆ ಎಲ್ಲಾ ಆಡಳಿತಾತ್ಮಕ ಕಾರ್ಯಗಳಿಗೆ ಬೇಡಿಕೆಯನ್ನು/ ಅಂಕಿ-ಅಂಶಗಳನ್ನು ಪರಿಗಣಿಸಿ ಕ್ರಿಯಾಯೋಜನೆ ಹಾಗೂ ಆಡಳಿತಾತ್ಮಕ ನಿರ್ಣಯಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಉಲ್ಲೇಖಿತ (1)ರ ಸುತ್ತೋಲೆಯಂತೆ ಪ್ರಸಕ್ತ ವರ್ಷ ಶಾಲೆಗಳಲ್ಲಿ ಮಕ್ಕಳನ್ನು ದಾಖಲಾತಿ ಮಾಡಿಕೊಳ್ಳಲು ದಿನಾಂಕ: 31/12/2021 ರವರೆಗೆ ಕಾಲಾವಕಾಶವನ್ನು ವಿಸ್ತರಿಸಲಾಗಿದ್ದು, ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರು ದಿನಾಂಕ: 31/12/2021 ರಲ್ಲಿದ್ದಂತೆ ಸ್ಯಾಟ್ಸ್ ತಂತ್ರಾಂಶದಲ್ಲಿ ಪ್ರತೀ ಶಾಲೆವಾರು ಮಕ್ಕಳ ದಾಖಲಾತಿ ವಿವರಗಳನ್ನು ಕಡ್ಡಾಯವಾಗಿ ದಿನಾಂಕ: 04/01/2022 ರ ಒಳಗಾಗಿ ಇಂದೀಕರಿಸತಕ್ಕದ್ದು. ವ್ಯಾಪ್ತಿಯ ಮುಖ್ಯಶಿಕ್ಷಕರೊಂದಿಗೆ ಚರ್ಚಿಸಿ ಕ್ಷೇತ್ರಶಿಕ್ಷಣಾಧಿಕಾರಿಗಳು ಸ್ಯಾಟ್ಸ್ ತಂತ್ರಾಂಶದಲ್ಲಿ ಪರಿಶೀಲಿಸಿ ಅಂತಿಮವಾಗಿ ದೃಢೀಕರಿಸಿ ದಿನಾಂಕ: 06/01/2022 ರ ಒಳಗಾಗಿ ಉಪನಿರ್ದೇಶಕರಿಗೆ ಸಲ್ಲಿಸತಕ್ಕದ್ದು.

ಕ್ಷೇತ್ರಶಿಕ್ಷಣಾಧಿಕಾರಿಗಳು ಸ್ಯಾಟ್ಸ್ ತಂತ್ರಾಂಶದಲ್ಲಿ ಸಲ್ಲಿಸಿರುವ ಶಾಲಾವಾರು ಮಕ್ಕಳ ದಾಖಲಾತಿ ಅಂಕಿ-ಅಂಶಗಳನ್ನು ಉಪನಿರ್ದೇಶಕರು(ಆಡಳಿತ) ಇವರು ಪರಿಶೀಲಿಸಿ ದಿನಾಂಕ: 10/01/2022 ರ ಒಳಗಾಗಿ ದೃಢೀಕರಿಸಿ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ. ಇದು ಅತ್ಯಂತ ಪ್ರಮುಖಾಂಶವಾಗಿದ್ದು ಮುಂದಿನ ಶೈಕ್ಷಣಿಕ ಸಾಲಿನ ಎಲ್ಲಾ ಚಟುವಟಿಕೆಗಳಿಗೆ ಪರಿಗಣಿಸುವ ಅಂಕಿ-ಅಂಶಗಳಾಗಿರುವುದರಿಂದ ಹೆಚ್ಚು ಜವಾಬ್ದಾರಿಯಿಂದ ನಿಖರವಾದ ಮಾಹಿತಿಯನ್ನು ಅಂತಿಮಗೊಳಿಸಿ ದೃಢೀಕರಿಸಿ ಸಲ್ಲಿಸುವುದು. ನಿಗಧಿಪಡಿಸಿದ ದಿನಾಂಕಕ್ಕೆ ಶಾಲಾವಾರು ಮಕ್ಕಳ ದಾಖಲಾತಿ ವಿವರಗಳಲ್ಲಿ ಏನಾದರೂ ವ್ಯತ್ಯಾಸಗಳು ಕಂಡುಬಂದಲ್ಲಿ ಸಂಬಂಧಪಟ್ಟ ಕ್ಷೇತ್ರಶಿಕ್ಷಣಾಧಿಕಾರಿಗಳು/ಉಪನಿರ್ದೇಶಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

(ಡಾ॥ ವಿಶಾಲ್. ಆರ್) ಭಾ.ಆ.ಸೇ.
ಆಯುಕ್ತರು

ಇವರಿಗೆ,

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲ್ಬುರ್ಗಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆಗೆ ಇವರಿಗೆ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ..
4. ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಮುಖ್ಯೋಪಾಧ್ಯಾರುಗಳಿಗೆ ಸಂಬಂಧಪಟ್ಟ ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳ ಮುಖಾಂತರ ಅಗತ್ಯ ಕ್ರಮಕ್ಕಾಗಿ.
5. ಕಛೇರಿ ಪ್ರತಿ.